ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	817
ಮಾನ್ಯ ಸದಸ್ಯರ ಹೆಸರು	:	ಡಾ.ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ವಿಷಯ	:	ಯಾತ್ರಿ ನಿವಾಸಗಳ ನಿರ್ಮಾಣದ ಬಗ್ಗೆ.
ಉತ್ತರಿಸುವ ದಿನಾಂಕ	:	17.12.2018
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ ಹಾಗೂ ರೇಷ್ಮೆ ಇಲಾಖೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿರುವ ಐತಿಹಾಸಿಕ ಶಿಥಿಲಾವಸ್ಥೆಯಲ್ಲಿರುವ ಕೋಟೆ ಕೊತ್ತಲ ಸ್ಮಾರಕಗಳನ್ನು ಗುರ್ತಿಸಲಾಗಿದೆಯೆ; ವೀಕ್ಷಣೆ ಹಾಗೂ ಅಧ್ಯಯನಕ್ಕಾಗಿ ಬರುವ ಪ್ರವಾಸಿಗಳ ಸಂಖ್ಯೆ ಎಷ್ಟು.</td><td>ಹೌದು. ಸಾಕಷ್ಟು ಪ್ರವಾಸಿಗರು ಆಗಮಿಸುತ್ತಿದ್ದಾರೆ.</td></tr>
<tr><td>ಆ</td><td>ಶಿಥಿಲಾವಸ್ಥೆಯ ಆಕರ್ಷಣೆ ಕಲಾತ್ಮಕ ಪಳೆಯುಳಿಕೆಗಳನ್ನು ಜೀರ್ಣೋದ್ಧಾರಗೊಳಿಸಿ ಪ್ರವಾಸಿಗರನ್ನು ಆಕರ್ಷಿಸಲು ವಿಶೇಷ ಯೋಜನೆ ರೂಪಿಸಲಾಗಿದೆಯೇ; (ಅನುದಾನದ ವಿವರ ನೀಡುವುದು)</td><td>ಇಲ್ಲ. ಆದಾಗ್ಯೂ ಪ್ರವಾಸಿಗರನ್ನು ಆಕರ್ಷಿಸಲು ರೂ.2969.85ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೆಳಕಂಡ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.
<table>
<tr><th>ಕ್ರ.ಸಂ</th><th>ಕಾಮಗಾರಿಯ ವಿವರ</th></tr>
<tr><td>1</td><td>ಮಾಗಡಿಕೋಟೆಯ ಸಂರಕ್ಷಣೆ</td></tr>
<tr><td>2</td><td>ಮಾಗಡಿ ಕೋಟೆಯ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯ ಅಭಿವೃದ್ಧಿ.</td></tr>
<tr><td>3</td><td>ಶಿರಾ ಪಟ್ಟಣದಲ್ಲಿರುವ ಶ್ರೀ ಕಸ್ತೂರಂಗಪ್ಪ ನಾಯಕನ ಕೋಟೆಯ ಸಂರಕ್ಷಣೆ</td></tr>
<tr><td>4</td><td>ಶಿರಾ ಪಟ್ಟಣದಲ್ಲಿರುವ ಶ್ರೀ ಕಸ್ತೂರಿರಂಗಪ್ಪ ನಾಯಕನ ಕೋಟೆಯ ಆವರಣದಲ್ಲಿ ಅಭಿವೃದ್ಧಿ ಕಾಮಗಾರಿ</td></tr>
<tr><td>5</td><td>ಶ್ರೀರಂಗಪಟ್ಟಣ ಕೋಟೆ ಗೋಡೆಯ (ಬೆಂಗಳೂರು ದ್ವಾರದ ಎಡ ಹಾಗೂ ಬಲ ಗೋಡೆಗಳ, ಆನೆ ದ್ವಾರದ ಮತ್ತು ಮೈಸೂರು ದ್ವಾರದ ಎರಡನೇ ಪ್ರದೇಶದ ಗೋಡೆಗಳ) ಸಂರಕ್ಷಣೆ ಹಾಗೂ ಪುನರ್‌ನಿರ್ಮಾಣ ಕಾಮಗಾರಿ</td></tr>
<tr><td>6</td><td>ಶ್ರೀರಂಗಪಟ್ಟಣ ಕೋಟೆಯ ಮೂರನೇ ಹಾಗೂ ನಾಲ್ಕನೇ ಗೋಡೆ ಸಂರಕ್ಷಣೆ ಹಾಗೂ ಪುನರ್‌ನಿರ್ಮಾಣಕಾಮಗಾರಿ.</td></tr>
<tr><td>7</td><td>ಶ್ರೀರಂಗಪಟ್ಟಣ ಕೋಟೆಯ (ಟಿ.ಎಂ.ಸಿ ಕಛೇರಿಯ ಹತ್ತಿರದ ಬೆಂಗಳೂರು ದ್ವಾರ, ಆನೆ ದ್ವಾರದ ಮತ್ತು ಪ್ರವೇಶದ್ವಾರದ ಗೋಡೆಗಳ) ಸಂರಕ್ಷಣೆ ಹಾಗೂ ಪುನರ್‌ನಿರ್ಮಾಣ ಕಾಮಗಾರಿ.</td></tr>
<tr><td>8</td><td>ಶ್ರೀರಂಗಪಟ್ಟಣ ಕೋಟೆಯ (ಟಿ.ಎಂ.ಸಿ ಕಛೇರಿಯ ಎದುರುಗಡೆಯ ಆನೆ ದ್ವಾರದ ಹತ್ತಿರವಿರುವ ಪ್ರವೇಶದ್ವಾರದ ಎನ್‌ಹೆಚ್-275 ಹೆದ್ದಾರಿಯಿಂದ ಶ್ರೀರಂಗಪಟ್ಟಣದವರೆಗಿನ ಗೋಡೆಯ) ಸಂರಕ್ಷಣೆ ಹಾಗೂ ಆರು ಮದ್ದಿನ ಮನೆಗಳ ಸಂರಕ್ಷಣಾ ಕಾಮಗಾರಿ.</td></tr>
</table></td></tr>
<tr><td>ಇ</td><td>ರಾಜ್ಯದ ಪ್ರತಿ ಮೂಲೆಯಲ್ಲಿರುವ ಇಂತಹ ಸ್ಮಾರಕಗಳ ಬಗ್ಗೆ ಮಕ್ಕಳಲ್ಲೇ ಅರಿವು ಮೂಡಿಸಲು ಪಠ್ಯ ಪುಸ್ತಕಗಳಲ್ಲಿ ಮಾಹಿತಿ ಒದಗಿಸುವ ಯಾವುದಾದರೂ ಕ್ರಮ ಕೈಗೊಳ್ಳಲಾಗಿದೆಯೇ;</td><td>ಇಲ್ಲ</td></tr>
<tr><td>ಈ</td><td>ಇಂತಹ ಪ್ರವಾಸೋದ್ಯಮದಿಂದ ಬೊಕ್ಕಸಕ್ಕೆ ಬರುತ್ತಿರುವ ಆದಾಯ ಎಷ್ಟು; ಕೇಂದ್ರ/ರಾಜ್ಯ ಅನುದಾನ, ಅವಶ್ಯಕತೆ ಬಳಕೆ ಬಗ್ಗೆ ವಿವರ ಒದಗಿಸುವುದು?</td><td>ಪ್ರವಾಸೋದ್ಯಮಕ್ಕೆ ನೇರ ಆದಾಯ ಬರುವುದಿಲ್ಲ.</td></tr>
</table>

ಪ್ರಇ 145 ಪ್ರವಾವಿ 2018

(ಸಾ.ರಾ.ಮಹೇಶ್)
ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

E/2018-19/ACT-6/LAQ&LCQ/1